ದಿನಾಂಕ 22.08.2019 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀಸವಾಲು : ಶ್ರೀ ಬಿ.ಜೆ.ಆರ್ ವಕೀಲರಿಂದಃ**

ನಾನು ಸಾಕಷ್ಟು ಸಂಖ್ಯೆಯಲ್ಲಿ ಪತ್ರಗಳನ್ನು ಬರವಣಿಗೆ ಮಾಡಿದ್ದೇನೆ. ನಾನು ಬರೆದ ಪತ್ರಗಳಿಗೆ ಮಾತ್ರ ಪತ್ರ ಬರಹಗಾರನಾಗಿ ಸಹಿ ಮಾಡಿ, ನೊಂದಣಿ ಮಾಡಿಸುತ್ತೇನೆ. ಬೇರೆಯವರು ತಯಾರು ಮಾಡಿದ ಪತ್ರಗಳಿಗೆ ನಾನು ಪತ್ರ ಬರಹಗಾರನಾಗಿ ಸಹಿ ಮಾಡುವುದಿಲ್ಲ. ೪ ನೇ ಪ್ರತಿವಾದಿ ನನಗೆ ೨೦೦೦ ನೇ ಸಾಲಿನಿಂದಲೂ ಪರಿಚಯವಿದ್ದಾರೆ. ಸ್ವತ್ತಿಗೆ ಸಂಬಂಧಿಸಿದ ದಾಖಲೆಯನ್ನು ತಿಪ್ಪಮ್ಮ ನನಗೆ ತಾಲ್ಲೂಕು ಕಚೇರಿ ಬಳಿ ನೀಡಿರುತ್ತಾರೆ. ನಾಗೇಂದ್ರ ಇವರ ಮೂಲಕ ಪತ್ರ ಬೆರಳಚ್ಚು ಮಾಡಿಸಿರುತ್ತೇನೆ. ಕ್ರಯಪತ್ರ ಬರೆಸುವ ಕಾಲಕ್ಕೆ ಹಿಂದಿನ ಕ್ರಯಪತ್ರ, ಮ್ಯುಟೇಶನ್ ದಾಖಲೆ ಮತ್ತು ಹಳೆಯ ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ. ಹಳೆಯ ಕ್ರಯಪತ್ರದ ಆಧಾರದ ಮೇಲೆ ಕ್ರಯ ಪತ್ರವನ್ನು ಬರೆದಿರುತ್ತೇನೆ. ಈರ ಮರಿಯಪ್ಪನವರಿಗೆ ೫ ಜನ ಸಹೋದರರು ಹಾಗೂ ಅವರೆಲ್ಲ ವಿಭಾಗವಾಗಿದ್ದಾರೆ ಎಂದು ತಿಪ್ಪಮ್ಮ ತಿಳಿಸಿದ್ದಾರೆ. ಆ ಬಗ್ಗೆ ದಾಖಲೆ ಕೊಟ್ಟಿಲ್ಲ. ಕ್ರಯ ಪತ್ರ ಬರೆಯುವ ಕಾಲಕ್ಕೆ ಈರ ಮರಿಯಪ್ಪನವರಿಗೆ ಸ್ವತ್ತು ಮಂಜೂರಾಗಿರುವ ದಾಖಲೆಯನ್ನು ಸಹ ನೋಡಿರುತ್ತೇನೆ. ೪ನೇ ಪ್ರತಿವಾದಿ ನನಗೆ ತಪ್ಪು ಮಾಹಿತಿಯನ್ನು ನೀಡಿ, ಕ್ರಯ ಪತ್ರ ಬರೆಸಿದ್ದಾರೆ ಎಂದರೆ ಸರಿಯಲ್ಲ. ಕ್ರಯದ ಸ್ವತ್ತಿನಲ್ಲಿ ಈರ ಮರಿಯಪ್ಪನ ಸಹೋದರರು ಭಾಗ ಮಾಡಿಕೊಂಡು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾನು ೪ನೇ ಪ್ರತಿವಾದಿಯ ಚಿತಾವಣೆಯ ಮೇರೆಗೆ ಸುಳ್ಳು ಸಂಗತಿಗಳ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ,

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.